**NISARAGA YANA** - A Volume of Environmental Poems by different writers. Published by Kamala Prakashana, Samagra Vikasa Trust (R.) Ashoka Nagara, Sirsi - 581402 (U.K.)

ಪ್ರಕಾಶಕರು : ಕಮಲ ಪ್ರಕಾಶನ
ಸಮಗ್ರ ವಿಕಾಸ ಟ್ರಸ್ಟ್ (ರಿ.)
ಅಶೋಕ ನಗರ, ಶಿರಸಿ
ಮೊ: 9448774780

ಹಕ್ಕುಗಳು : ಪ್ರಕಾಶಕರದ್ದು.

ಪುಟಗಳು : 56 + 4 = 60 (ರಕ್ಷಾಪುಟ ಸಹಿತ)

ಪುಸ್ತಕದ ಆಕಾರ : 1/8 ಕ್ರೌನ್

ಬೆಲೆ : ₹ 50

ಮುದ್ರಕರು : ಚಿತ್ರಲೇಖಾ ಮುದ್ರಣ,
ಹೊಸಪೇಟೆ ರಸ್ತೆ, ಶಿರಸಿ
ಮೊಬೈಲ್: 9945397760

**ಯುತ್ ಫಾರ್ ಸೇವಾ**
ಜ್ಞಾನಗಿರಿ, #75/76, 4ನೇ ಕ್ರಾಸ್, 2ನೇ ಮುಖ್ಯ ರಸ್ತೆ, ಸೌಧಾಮಿನಿ ಲೇಔಟ್, ಕೋಣನಕುಂಟೆ
ಬೆಂಗಳೂರು – 62, ww,youthforseva.org.

Youth *for* seva
experience the joy of giving



## ಅರ್ಪಣೆ



ದಿ. ಶ್ರೀ ಮಧುಕರ ಗುರುರಾಯ ಶೇಟ್ ಶಿರಸಿ

ಸಮಾಜ ಸೇವೆಯಲ್ಲಿ ತಮ್ಮನ್ನು ತಾವು
ತೊಡಗಿಸಿಕೊಂಡು
ಸದಾ ನಗುಮೊಗದ ಸೇವೆ ನೀಡುತ್ತಿದ್ದ
ಸಮಾಜ ಸೇವಕ
ದಿ. ಶ್ರೀ ಮಧುಕರ ಗುರುರಾಯ ಶೇಟ್
ಅವರಿಗೆ ಈ ಕೃತಿ ಅರ್ಪಣೆ

## ಪರಿವಿಡಿ


| ಅ.ನಂ | ಕವನದ ಹೆಸರು | ಪುಟ |
|---|---|---|
| 1. | ಬನಸಿರಿ | 10 |
| 2 | ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ | 11 |
| 3. | ಮುಂಗಾರಿನ ಅಭಿಷೇಕ | 12 |
| 4. | ಹಸಿರು ಪಯಣ | 13 |
| 5. | ವನದೇವತೆ ಪೂಜೆಗೆ | 13 |
| 6. | ಹಸಿರು ನಮ್ಮ ಉಸಿರು | 14 |
| 7. | ಕೊಡಗಿನ ಕಾವೇರಿ | 15 |
| 8. | ಈ ಹಸಿರು ಸಿರಿಯಲಿ.. | 16 |
| 9. | ನಿತ್ಯೋತ್ಸವ... | 17 |
| 10. | ಮಣ್ಣಿಂದ ಕಾಯ ಮಣ್ಣಿಂದ | 18 |
| 11. | ಮಳೆಯ ದಯ ಮಾಡೋ | 19 |
| 12. | ಧರೆಗವತರಿಸಿದ ಸ್ವರ್ಗದಿ ಸ್ಪರ್ಧಿಯು | 20 |
| 13. | ಪ್ರಕೃತಿಯೇ ಗುರು | 20 |
| 14. | ಬೆಟ್ಟದ ತುದಿಯಲ್ಲಿ | 21 |
| 15. | ನದನದಿಗಳ ಗಿರಿವನಗಳ ತಾಯೆ... | 22 |
| 16. | ವನಸುಮ | 23 |
| 17. | ಚಂದಿರನೇತಕೆ | 24 |
| 18. | ಸುಮ ಸುಂದರ ತರುಲತೆಗಳ ಬೃಂದಾವನ.. | 25 |
| 19. | ವಸುಂಧರೆಯ ಪೂಜಿಸೋಣ.. | 26 |
| 20. | ಪರಿಸರವ ಉಳಿಸೋಣ ಬನ್ನಿ. | 27 |
| 21. | ನಿನ್ನದೆ ನೆಲ | 28 |
| 22. | ಯಾವ ನೆಲದ ಗಂಧ ಗಾಳಿ | 29 |
| 23. | ವರ್ಷಧಾರೆ | 29 |





| | | |
|---|---|---|
| 24. | ಭೂವನದ ಮಧುಗಂಗೆ ನನ್ನೆಡೆಗೆ ಬಾ | 30 |
| 25. | ಪ್ರಕೃತಿ ಮಾತೆಯೇ ಸುಂದರ | 31 |
| 26. | ಹೂವು ಹೊರಳುವವು ಸೂರ್ಯನ ಕಡೆಗೆ | 32 |
| 27. | ಹಕ್ಕಿಯ ಹಾಡಿಗೆ ತಲೆದೂಗುವ ಹೂ... | 33 |
| 28. | ಇಳಿದು ಬಾ ತಾಯಿ... | 34 |
| 29. | ಪಾತರಗಿತ್ತೀ ಪಕ್ಕಾ... | 35 |
| 30. | ಬನ್ನಿ ಮೋಡಗಳೇ ಭರತ ಭುವಿಯ ಕಡೆಗೆ | 36 |
| 31. | ಪಶ್ಚಿಮ ಕಾನನ ನಯನ ಮನೋಹರ | 37 |
| 32. | ಮನೆಮದ್ದಿನ ಲಾವಣಿ | 38–39 |
| 33. | ಜೀವನ ಸೃಷ್ಟಿಯ ಸಂಕಲನ | 40 |
| 34. | ಮಳೆಕೊಯ್ಲು ಮಾಡೋಣ | 41 |
| 35 | ಹರಿವ ತೊರೆ ತೀರದಲಿ | 42 |
| 36. | ಹನಿ ಹನಿ ನೀರು ತಾನು ಅಮೂಲ್ಯ | 43 |
| 37. | ಭೋರೆಂದು ಸುರಿದು, ಸುಧೆಯಾಗಿ | 44 |
| 38. | ಬನ್ನಿ ನೀರ ಉಳಿಸುವಾ | 45 |
| 39. | ಆ ದೇವನ ಕೊಡುಗೆ | 46 |
| 40. | ಮುಂಗಾರಿನ ಸಿಂಗಾರ | 47 |
| 41. | ಆಹಾ ಸೊಬಗು ವರ್ಷಧಾರೆ | 48 |
| 42. | ಪಶ್ಚಿಮಾದ್ರಿಯ ಸ್ವರ್ಣಾದ್ರಿ | 49 |
| 43. | ಈ ಪರಿಸರ ನಮ್ಮದು | 50 |
| 44. | ಪರ್ಯಾವರಣ | 51 |
| 45. | ಕಡಿಯ ಬೇಡಿರಣ್ಣ ಮರವ | 52 |
| 46. | ಗಿಡನೆಡಿ ಗಿಡನೆಡಿ | 53 |
| 47. | ನದಿ | 54 |
| 48. | ಸೃಷ್ಟಿ ಚೆಲುವು | 55 |
| 49. | ಬೆಳ್ಳಕ್ಕಿಗಳು | 56 |

## ಆ ದೇವನ ಕೊಡುಗೆ

**– ರಾಜು ಮಧುಕರ ಶೇಟ್, ಶಿರಸಿ**

ಆ ದೇವನ ಕೊಡುಗೆ ಈ ಜಲ
ಉಳಿಸೋಣ ನಾವು ಉಳಿಸೋಣ
ಮನುಕುಲಕೆ ಜೀವವು ಈ ಜಲ
ಉಳಿಸೋಣ ನಾವು ಉಳಿಸೋಣ॥
ಉಳಿಸೋಣ ನಾವು ಉಳಿಸೋಣ
ಜೀವ ಜಲವಾ ಉಳಿಸೋಣ॥
ಜೀವನದಿ ಕಾವೇರಿ
ಮಾನವನಿಗೆ ಸಹಕಾರಿ
ಚಿನ್ನದಾ ಬೆಳೆ ಬೆಳೆಯಲು
ರೈತರಿಗೆ ಉಪಕಾರಿ॥
ಉಳಿಸೋಣ ನಾವು ಉಳಿಸೋಣ
ಜೀವ ಜಲವಾ ಉಳಿಸೋಣ॥
ನೀರಿನ ಅತಿಯಾದ ಬಳಕೆಯಿಂದ
ಅನಾವೃಷ್ಟಿ ನೀರಿಂದ
ಕೆರೆ ಕಟ್ಟೆಗಳ ನಿರ್ಮಿಸಿ
ಜಲಕ್ಷಾಮ ತೊಲಗಿಸಿ॥
ಉಳಿಸೋಣ ನಾವು ಉಳಿಸೋಣ
ಜೀವ ಜಲವಾ ಉಳಿಸೋಣ॥
ಪರಿಸರವ ಉಳಿಸಿ ಪರಿಸರವ ರಕ್ಷಿಸಿ
ಜೀವಜಲದ ರಕ್ಷಣೆ ನಮ್ಮ ಹೊಣೆ
ಹನಿ ಹನಿ ನೀರಿನ ಕಣಕಣ ಮಣ್ಣಿನ
ರಕ್ಷಣೆ ನಮ್ಮ ಹೊಣೆ॥
ಉಳಿಸೋಣ ನಾವು ಉಳಿಸೋಣ
ಜೀವ ಜಲವಾ ಉಳಿಸೋಣ॥



## ಮುಂಗಾರಿನ ಸಿಂಗಾರ

**– ಡಿ. ಎಂ. ಭಟ್ಟ ಕುಳವೆ**

ಮುಂಗಾರು ಮಳೆರಾಯ ಆಷಾಡದಲೆ ಧರೆಗಿಳಿದು ಬಂದ
ಇಳೆಯ ತಣಿಸಲು ವರುಣನಪ್ಪಣೆಯ ಆದೇಶ ತಂದ
ಗುಡುಗು ಸಿಡಿಲಿನ ಮಿಂಚು ಆಡಂಬರದ ಅಬ್ಬರ
ಕಪ್ಪೆಗಳ ವಟವಟ ಪಕ್ಷಿಗಳ ಕಲರವದ ಸಡಗರ॥

ಕೋಗಿಲೆಯ ಜೊತೆಗೂಡಿ ನವಿಲು ನರ್ತನ ಮಾಡೆ
ಕವಿಹೃದಯದಿ ಶೃಂಗಾರದ ಕವನಗಳು ಒಡಮೂಡೆ
ಮುಂಗಾರಿನ ಸಿಂಗಾರಕೆ ಕಟ್ಟೆ ಸ್ನೇಹದಾ ತೋರಣ
ಹಸಿರು ಹೊದಿಕೆಯಲಿ ನೋಡು ಭೂತಾಯ ಔತಣ॥

ಹಸಿರಾಗಿ ಚಿಗುರೊಡೆಯಿತು ನವ ವಧುವಿನಂತೆ ಶ್ರೀವನ
ಜೀವಜಂತು ಜನುಮ ಪಡೆಯೆ ಕುಣಿದಾಡಿತು ಕಾನನ
ಎಲ್ಲೆಲ್ಲೂ ವಿಹಂಗಮ ಮಣ್ಣ ಪರಿಮಳ ಗಮಗಮ
ಜುಳುಜುಳು ಹರಿವ ನಾದಕೆ ಮೊದಲಾಯ್ತು ಸರಿಗಮ॥

